# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2859 |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಂ. ರಮೇಶ್ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 30-03-2022 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಾದ್ಯಂತ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಅಕ್ರಮ ಗೋ ಸಾಗಾಣಿಕೆಗೆ ಸಂಬಂಧಿಸಿದಂತೆ ಎಷ್ಟು ಪ್ರಕರಣಗಳು ದಾಖಲಾಗಿವೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ರಾಜ್ಯದಾದ್ಯಂತ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಅಕ್ರಮ ಗೋ ಸಾಗಾಣಿಕೆಗೆ ಸಂಬಂಧಿಸಿದಂತೆ ದಾಖಲಾದ ವರ್ಷವಾರು ಹಾಗೂ ಜಿಲ್ಲಾವಾರು ಪ್ರಕರಣಗಳ ವಿವರ ಕೆಳಗಿನಂತಿದೆ. (ಕೋಷ್ಟಕ ಕೆಳಗೆ) ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-"ಎ" ದಲ್ಲಿ ಲಗತ್ತಿಸಿದೆ. |
| ಆ | ಪ್ರಕರಣ ದಾಖಲಾಗಿದ್ದಲ್ಲಿ, ಎಷ್ಟು ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಿದೆ. (ಪ್ರಕರಣವಾರು ಮಾಹಿತಿ ನೀಡುವುದು) | ಒಟ್ಟು 353 ಪ್ರಕರಣಗಳಲ್ಲಿನ ತಪ್ಪಿತಸ್ಥರಿಗೆ ಶಿಕ್ಷೆಯಾದ ವಿವರವನ್ನು ಅನುಬಂಧ-"ಬಿ" ದಲ್ಲಿ ಲಗತ್ತಿಸಿದೆ. |
| ಇ | ಅಕ್ರಮ ಗೋ ಸಾಗಾಟಕ್ಕೆ ಸಂಬಂಧಿಸಿದಂತೆ ದಾಖಲಾದ ಪ್ರಕರಣಗಳಲ್ಲಿ ಎಷ್ಟು ಹಸುಗಳನ್ನು ರಕ್ಷಿಸಲಾಗಿದೆ; (ಮಾಹಿತಿ ಒದಗಿಸುವುದು) | ಒಟ್ಟು ದಾಖಲಾದ 1721 ಪ್ರಕರಣಗಳಲ್ಲಿ 12095 ಹಸುಗಳನ್ನು ರಕ್ಷಿಸಲಾಗಿದೆ. |
| ಈ | ರಕ್ಷಿಸಿರುವ ಹಸುಗಳ ಸಂರಕ್ಷಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು? ಪ್ರಸ್ತುತ ಎಷ್ಟು ಹಸುಗಳನ್ನು ಸಂರಕ್ಷಿಸಲಾಗಿದೆ? (ಅಂಕಿ-ಅಂಶಗಳ ಸಹಿತ ಮಾಹಿತಿ ನೀಡುವುದು) | ಅಕ್ರಮ ಗೋ ಸಾಗಾಣಿಕೆ ಸಮಯದಲ್ಲಿ ವಶಪಡಿಸಿಕೊಂಡ ಜಾನುವಾರುಗಳನ್ನು ಹತ್ತಿರದ ಖಾಸಗಿ ಗೋ ಶಾಲೆಯಲ್ಲಿ ಬಿಡಲಾಗುತ್ತದೆ. ಇಂತಹ ಗೋ ಶಾಲೆಗಳಿಗೆ ಇಲಾಖೆಯಿಂದ ಸಹಾಯಾನುದಾನ ನೀಡಲಾಗುತ್ತಿದೆ. ಇಲ್ಲಿಯವರೆಗೆ ಒಟ್ಟು 141 ಗೋ ಶಾಲೆಗಳಿಗೆ ರೂ. 368.90 ಲಕ್ಷಗಳ ಅನುದಾನ ನೀಡಲಾಗಿದೆ. |

| ಕ್ರ ಸಂ. | ವರ್ಷ | ದಾಖಲಾದ ಪ್ರಕರಣಗಳ ಸಂಖ್ಯೆ |
|---|---|---|
| 1 | 2019 | 359 |
| 2 | 2020 | 593 |
| 3 | 2021 | 641 |
| 4 | 2022 | 128 |
| | ಒಟ್ಟು | 1721 |

ಸಂಖ್ಯೆ:ಹೆಚ್‌ಡಿ 189 ಎಸ್‌ಎಸ್‌ಟಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು